# ಸಂಪಾದಕೀಯ

## ಮಕ್ಕಳಿಗೆ ಧಾರ್ಮಿಕ ಶಿಕ್ಷಣ

**ತಮ್ಮ** ಮಕ್ಕಳು ತಮಗಿಂತ ಒಳ್ಳೆಯ ವ್ಯಕ್ತಿಗಳಾಗಬೇಕೆಂದು ತಾಯಿತಂದೆಯರು ಬಯಸುತ್ತಾರೆ. ತಾವು ಜೀವನದಲ್ಲಿ ಕಂಡ ವಿಫಲತೆ, ಕಷ್ಟ-ನಷ್ಟಗಳು ಮಕ್ಕಳಿಗೆ ಬಾರದಿರಲಿ ಎಂಬ ಕಾಳಜಿ ಅವರಿಗಿರುತ್ತದೆ. ತಾವು ಸಾಧಿಸಿದ್ದಕ್ಕಿಂತ ಅಧಿಕವಾಗಿಯೇ ತಮ್ಮ ಮಕ್ಕಳು ಸಾಧಿಸಬೇಕು ಎಂಬ ಆಕಾಂಕ್ಷೆಯಿಂದಾಗಿ ಮನೆಯಲ್ಲಿ ಒತ್ತಡದ ವಾತಾವರಣವನ್ನು ಸೃಷ್ಟಿಮಾಡುತ್ತಾರೆ. ತಾವು ಸಾಧಿಸಲಾಗದ ಮೌಲ್ಯಗಳನ್ನು ಮಕ್ಕಳಲ್ಲಿ ಕಂಡು ಮಾನಸಿಕ ತೃಪ್ತಿಯನ್ನು ಹೊಂದಲು ಪ್ರಯತ್ನಿಸುತ್ತಾರೆ. ಮಕ್ಕಳ ಭವಿಷ್ಯ ಹಾಗೂ ಉತ್ತಮಿಕೆಯಿಂದ ತಮ್ಮ ಜೀವನದ ಕೊರತೆಗಳನ್ನು ತುಂಬಿಕೊಳ್ಳುವ ಇಂತಹ ಪ್ರಯತ್ನದಿಂದಾಗಿ ಶಿಸ್ತು, ನಿಯಮಗಳನ್ನು ಹೇರುತ್ತ ಮಕ್ಕಳ ಹಿಂದೆ ಮುಂದೆ ಪೋಲೀಸಿನವರಂತೆ ಓಡಾಡುತ್ತಾರೆ. ಇಂತಹ ವರ್ತನೆಯಿಂದ ಮಕ್ಕಳಲ್ಲಿ ಪ್ರತಿಭಟನೆಯ ಭಾವನೆ ಪ್ರಬಲವಾಗುತ್ತಾ ಬರುತ್ತದೆ. ಯಾವುದೇ ಒಳ್ಳೆಯ ವಿಚಾರವನ್ನು, ಯಾರೇ ಹೇಳಿದರೂ, ಅಲ್ಲಗಳೆಯುವ ಜಿದ್ದು ಅವರಲ್ಲಿ ಮೂಡಿಬಿಡುತ್ತದೆ. ಇದೊಂದು ನಿಷೇಧಾತ್ಮಕ ಪ್ರವೃತ್ತಿ. ಒಮ್ಮೆ ಇದು ಸ್ಥಿರವಾಗಿ ನಿಂತರೆ ವ್ಯಕ್ತಿಯು ಮುಂದೆ ತನ್ನ ಧೋರಣೆಗಳಲ್ಲೇ ನಿಂತುಬಿಡುವ ಹಂತ ತಲುಪಿ, ಹೊಸತನವನ್ನು ತಿರಸ್ಕರಿಸುವ ಕೂಪಮಂಡೂಕವಾಗುತ್ತಾನೆ.

ಮಕ್ಕಳಲ್ಲಿ ಶಿಸ್ತನ್ನು ರೂಢಿಸುವುದು ಪೋಷಕರ ಕರ್ತವ್ಯ. ಆದರೆ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ನೀಡುವ ನೆಪದಲ್ಲಿ "ಹೀಗೆ ಮಾಡಬೇಡ, ಹಾಗೆ ಇರಬೇಡ" ಎಂದು ಸದಾ ಹೇಳುವ ಆವಶ್ಯಕತೆಯಿಲ್ಲ. ವ್ಯಕ್ತಿಯಲ್ಲಿ ಸಹಜವಾಗಿಯೇ ನೈತಿಕ ಪ್ರಜ್ಞೆ ಇರುತ್ತದೆ. ಅದಕ್ಕೆ ಪೋಷಣೆ ದೊರೆತರೆ ಸಾಕು. ಬುದ್ಧಿಯ ವಿಕಾಸಕ್ಕೆ ಆಸ್ಪದ ಮಾಡಿಕೊಟ್ಟರೆ, ಒಳಿತು ಕೆಡುಕುಗಳ ನಿರ್ಣಯವನ್ನು ಮಾಡುವ ಸಾಮರ್ಥ್ಯವು ಬೆಳೆಯುತ್ತದೆ. ಧರ್ಮದ ಸೂಕ್ಷ್ಮಗಳನ್ನು ಮಾತಿನಿಂದ ಹೇಳಿಕೊಡುವುದಕ್ಕಿಂತ ಮನೆಯವರ ನಡವಳಿಕೆಯಿಂದ ಸ್ವಾಭಾವಿಕವಾಗಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಯಾವ ಮನೆಯಲ್ಲಿ ಬಡವರಿಗೆ ಸಹಾಯ ಮಾಡುವ, ಅಕ್ಕಪಕ್ಕದವರ ಕಷ್ಟನಷ್ಟಗಳಿಗೆ ಸ್ಪಂದಿಸುವ ಕರುಣೆಯಿರುವುದಿಲ್ಲವೋ ಅಂತಹ ಮನೆಯ ಮಕ್ಕಳು ಸ್ವಾರ್ಥಿಗಳಾಗುವುದರಲ್ಲಿ ಸಂದೇಹವಿಲ್ಲ. ಮುಂದೆ ತಂದೆತಾಯಿಗಳನ್ನೇ ತಿರಸ್ಕರಿಸುವ ಕಠಿಣತೆಯನ್ನೂ ಇವರು ತೋರಬಲ್ಲರು.

ಅಂತರಂಗದ ಪಕ್ವತೆಯಿಂದ ಹೊರಹೊಮ್ಮುವ ಪ್ರಜ್ಞಾವಂತ ನಡತೆ ವ್ಯಕ್ತಿ ಹಾಗೂ ಸಮಾಜಗಳ ನಡುವೆ ಬಾಂಧವ್ಯವನ್ನು ಬೆಸೆಯಬಲ್ಲುದು. ವ್ಯಕ್ತಿಗತ ಧರ್ಮವು ಎಷ್ಟೇ ಉತ್ಕೃಷ್ಟವೆನಿಸಿದರೂ ಅದು ಸಮಾಜದ ಹಿತವನ್ನೂ ಗುರಿಯಾಗಿ ಇರಿಸಿಕೊಳ್ಳದಿದ್ದರೆ ಅನಾಹುತವೇ ಪರಿಣಮಿಸುವುದು. ಭಯೋತ್ಪಾದಕರು ತಾವು ಮಾಡುತ್ತಿರುವ ಕೊಲೆ, ಹಾನಿಗಳೆಲ್ಲ ಧಾರ್ಮಿಕ ಕ್ರಿಯೆಗಳೆಂದೂ, ಅವುಗಳಿಂದ ತಮ್ಮ ವೈಯಕ್ತಿಕ ಧರ್ಮವು ಸಫಲತೆ ಹೊಂದುವುದೆಂದೂ ಭಾವಿಸುತ್ತಾರೆ. ಕಳ್ಳನು ತನ್ನ ಮನೆಯವರ ಬೇಡಿಕೆಗಳನ್ನು ಪೂರೈಸಲು ಇತರರ ಸ್ವತ್ತನ್ನು ದೋಚುತ್ತಾನೆ; ಅಧಿಕಾರದಲ್ಲಿರುವ ಅನೇಕರು ಅನೈತಿಕವಾಗಿ ಹಣಸಂಪಾದನೆ ಮಾಡಿ ಜನಸಾಮಾನ್ಯರಿಗೆ ಸಿಗಬೇಕಾದ ಸೌಲಭ್ಯಗಳನ್ನು ನೀಡದೆ ವಂಚಿಸುತ್ತಾರೆ. ಇವರೆಲ್ಲ ಕೇವಲ ತಮ್ಮ ವೈಯಕ್ತಿಕ ಗುರಿ, ಆಸೆಗಳನ್ನು ಪೂರೈಸುವ ಸ್ವಾರ್ಥಿಗಳು. ಸಾಮಾಜಿಕ ಕಳಕಳಿ ಹಾಗೂ ಸಾಮುದಾಯಿಕ ಪ್ರಜ್ಞೆಯನ್ನು ಇವರು ಹೊಂದಿರುವುದಿಲ್ಲ. ಸ್ವಾಭಾವಿಕವಾದ ನೈತಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ತಮ್ಮ ದೇಹ ಹಾಗೂ ತಮ್ಮ ಸಂಪತ್ತು ಶಾಶ್ವತವಾಗಿರುತ್ತವೆ ಎಂದು ನಂಬುವ ಇವರು ಆಸುರೀ ಪ್ರವೃತ್ತಿಯುಳ್ಳವರು. ನೈತಿಕತೆ, ಧರ್ಮ ಇವೆಲ್ಲ ಇವರಿಗೆ ಬೇಕಿಲ್ಲವಾದರೂ ಕೆಲವೊಮ್ಮೆ ಅವನ್ನೇ ಬಳಸಿಕೊಂಡು ಅಧರ್ಮದಲ್ಲಿ ತೊಡಗುತ್ತಾರೆ. ಶ್ರೇಯಸ್ಸು, ಪ್ರೇಯಸ್ಸುಗಳ ವಿವೇಚನೆಗೆ ಇವರಲ್ಲಿ ಆಸ್ಪದವಿಲ್ಲ. ಇಂತಹ ವ್ಯಕ್ತಿಗಳು ತಮ್ಮ ಮಕ್ಕಳನ್ನೂ ಅದೇ ಮಾರ್ಗದಲ್ಲಿ ನಡೆಯಲು ಪ್ರೋತ್ಸಾಹಿಸುತ್ತ ಮುಗ್ಧ ಮನಸ್ಸಿನಲ್ಲಿರುವ ನೈತಿಕ ಪ್ರಜ್ಞೆಯ ಅಭಿವ್ಯಕ್ತಿಗೆ ಅಡ್ಡಿಯಾಗುತ್ತಾರೆ.

ಧಾರ್ಮಿಕ ನಡವಳಿಕೆ ಹಾಗೂ ನೈತಿಕ ಪ್ರಜ್ಞೆ ವ್ಯಕ್ತಿಯ ಅಂತರಂಗದ ವಿಕಾಸದ ಸಂಕೇತಗಳು. ಅಂಧಶ್ರದ್ಧೆಯನ್ನಾಗಲಿ, ಬಾಹ್ಯ ಆಡಂಬರ ಅಥವಾ ವೇಷ-ಭೂಷಣಗಳನ್ನಾಗಲಿ ಅದು ಅವಲಂಬಿಸಿರುವುದಿಲ್ಲ. ತಮ್ಮ ಧಾರ್ಮಿಕತೆಯನ್ನು ತೋರಿಸಿಕೊಳ್ಳುವ ಸಲುವಾಗಿ ತಿಲಕವಿಟ್ಟುಕೊಂಡು, ಕಿವಿಯಲ್ಲಿ ತುಳಸೀದಳವನ್ನು ಇರಿಸಿಕೊಳ್ಳುವವರನ್ನು ಹಾಗೂ ಕೃತ್ರಿಮವಾದ ಲಜ್ಜೆಯಿಂದ ಮುಖ ಮರೆ ಮಾಡಿಕೊಳ್ಳುವ ಹೆಂಗಸರನ್ನು ನಂಬಬಾರದು ಎಂದು ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಿದ್ದರು. ಇತರರು ಗಮನಿಸದೆ ಇರುವಾಗಲೂ ಒಬ್ಬ ವ್ಯಕ್ತಿಯು ತನ್ನ ನೈತಿಕತೆ ಹಾಗೂ ಧಾರ್ಮಿಕ ಪ್ರಜ್ಞೆಯನ್ನು ಬಿಟ್ಟುಕೊಡದಿದ್ದರೆ, ಆಗ ಮಾತ್ರ ಅದು ಸ್ಥಿರವಾದ ಗುಣವೆಂದು ಹೇಳಬಹುದು. ತೋರಿಕೆಯ ಧರ್ಮವು ವ್ಯಕ್ತಿಯ ಅಂತರಂಗವನ್ನು ಶುದ್ಧಗೊಳಿಸದೆ ಕೇವಲ ಜನರನ್ನು ಆಕರ್ಷಿಸುವ ಉಪಕರಣವಾಗುತ್ತದೆ. ಇಂತಹ ನಡವಳಿಕೆಯನ್ನು ದಾಸರು,

ಶರಣರು ಹಾಗೂ ಸಂತರು ಕಟುವಾಗಿ ಖಂಡಿಸಿದ್ದರೂ ಜನ ಸಾಮಾನ್ಯರು ಇಷ್ಟರಲ್ಲೇ ತೃಪ್ತಿಯನ್ನು ಕಾಣುತ್ತ ನೈಜಧರ್ಮ ದಿಂದ ದೂರವೇ ಉಳಿದುಬಿಡುತ್ತಾರೆ.

### ಪ್ರಶ್ನಿಸುವ ಸ್ವಾತಂತ್ರ್ಯವಿರಲಿ

ಮಕ್ಕಳು ಬೆಳೆದಂತೆ ಅವರಲ್ಲಿ ಪ್ರಶ್ನಿಸುವ ಪ್ರವೃತ್ತಿ ಕಂಡು ಬರುತ್ತದೆ. ಎಲ್ಲವನ್ನೂ ಪ್ರಶ್ನಿಸುವ ಅವರ ಮನೋವಿಕಾಸದ ಪ್ರಮುಖ ಹಂತವನ್ನು ಅನೇಕರು ಸಹಿಸಲಾರದೆ ಹತ್ತಿಕ್ಕಿ ಬಿಡುತ್ತಾರೆ. ಸಣ್ಣ ಪ್ರಾಯದಲ್ಲಿ ಭಾವನಾತ್ಮಕವಾಗಿ ಪ್ರೀತಿ ಯಿಂದ ಹೇಳಿದಾಗ ಆಲಿಸುವ, ಪಾಲಿಸುವ ಮಕ್ಕಳು ಸ್ವಲ್ಪ ದೊಡ್ಡವರಾದ ಮೇಲೆ ಪ್ರಶ್ನಿಸಲು ಪ್ರಾರಂಭಿಸಿದಾಗ ಅದನ್ನು ಉದ್ಧಟತನ, ಅತಿ ಬುದ್ಧಿವಂತಿಕೆಯೆಂದು ತಿರಸ್ಕರಿಸಿದರೆ ಅವರು ಏಕಾಂಗಿಗಳಾಗಿ ಜನರ ಸಂಪರ್ಕದಿಂದ ದೂರ ಸರಿಯಲು ಪ್ರಾರಂಭಿಸುತ್ತಾರೆ. ತಮ್ಮಲ್ಲಿ ಏಳುವ ಅನೇಕ ಸಂದೇಹಗಳನ್ನು ವ್ಯಕ್ತಪಡಿಸಲಾಗದೆ ಎಲ್ಲ ಆಚರಣೆಗಳಲ್ಲೂ ಶ್ರದ್ಧೆ ಕಳೆದುಕೊಳ್ಳುತ್ತಾರೆ. ನಂತರದ ಜೀವನದಲ್ಲೂ ತಮ್ಮ ಅನಿಸಿಕೆಗಳನ್ನು, ಭಾವನೆಗಳನ್ನು ವ್ಯಕ್ತಪಡಿಸಲಾಗದೆ, ಕೊರಗುತ್ತ ಮನೋವೇದನೆಗೆ ಒಳಗಾಗುತ್ತಾರೆ. ತಮ್ಮ ಧಾರ್ಮಿಕ ಭಾವನೆ ಗಳನ್ನು ಮಕ್ಕಳು ಪ್ರಶ್ನಿಸದೆ ಒಪ್ಪಿಕೊಂಡುಬಿಡಬೇಕು ಎಂದು ತಂದೆತಾಯಿಗಳು ಆಶಿಸುತ್ತಾರೆ. ತಮಗೆ ಗೊತ್ತಿರುವ ಅರೆಬರೆ ಧಾರ್ಮಿಕ ನಂಬಿಕೆಗಳನ್ನು ಅವರಿಗೆ ವರ್ಗಾಯಿಸುವುದು ತಮ್ಮ ಹಕ್ಕೆಂದೂ ತಿಳಿದಿರುತ್ತಾರೆ.

'ಈ ಜಗತ್ತು ಎಂದರೇನು?' 'ಸತ್ತನಂತರ ನನ್ನ ಸ್ನೇಹಿತರು ಎಲ್ಲಿಗೆ ಹೋಗುತ್ತಾರೆ?' ಪೂಜೆಮಾಡುವಾಗ 'ಹೀಗೇಕೆ' 'ಹಾಗೇಕೆ' ಎಂದು ಪ್ರಶ್ನಿಸುವ ಮಕ್ಕಳು ಯಾರೇ ಹೇಳಿಕೊಡ ದಿದ್ದರೂ ತಮ್ಮದೇ ಆದ ಧಾರ್ಮಿಕ ನಂಬಿಕೆಗಳನ್ನು ಹೊಂದಿರುತ್ತಾರೆ. ಪೋಷಕರು ನೀಡುವ ವಿವರಣೆಯನ್ನು ತಮ್ಮ ಮನಸ್ಸಿಗೆ ತೋಚುವ ಉತ್ತರಗಳೊಂದಿಗೆ ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮಕ್ಕಳಲ್ಲಿ ಸಾಮಾನ್ಯವಾಗಿ ಆಶ್ಚರ್ಯ, ಭಯಗಳಿಂದ ಕೂಡಿರುವ ಭಾವನೆಗಳಿರುತ್ತವೆ ಎಂಬುದನ್ನು ತಾಯಿತಂದೆಯರು ಮರೆಯಬಾರದು. ಮೊದಲು ಅವರ ಮನಸ್ಸಿಗೆ ತೋರಿರುವ ಉತ್ತರಗಳನ್ನು ಕೇಳಿ, ತಿಳಿದುಕೊಂಡು ಸರಿಯಿದ್ದರೆ ಶ್ಲಾಘಿಸಿ, ತಪ್ಪಿದ್ದರೆ ತಿಳಿಸಬೇಕು. ಅವರಿಗೆ ಸಕಾರಾತ್ಮಕ ಭಾವನೆಗಳೊಂದಿಗೆ ಧರ್ಮದ ಸೂಕ್ಷ್ಮತೆಗಳ ಒಂದಿರುವ ಮಾನವೀಯ ಹಾಗೂ ದೈವೀಗುಣಗಳ ಪರಿಚಯ ಮಾಡಿಕೊಡಬೇಕು. ಮಕ್ಕಳ ಮನಸ್ಸಿನಿಂದ ಭಯ ವನ್ನು ಹೋಗಲಾಡಿಸಿ ಎಲ್ಲ ರೀತಿಯ ದೌರ್ಬಲ್ಯವನ್ನೂ ಗೆಲ್ಲುವ ಛಲವನ್ನು ಅವರಲ್ಲಿ ತುಂಬಬೇಕು. ಮುಂದೆ ಬುದ್ಧಿ ಬೆಳೆದಾಗ ತಾಯಿತಂದೆಯರಿಂದ ಕಲಿತದ್ದು ತಪ್ಪೆಂದು ತಿಳಿದುಕೊಂಡು "ಇದನ್ನು ನಾನು ಮರೆತರೇ ಒಳ್ಳೆಯದು" ಎಂದು ಮಕ್ಕಳು ಭಾವಿಸುವಂತಾಗಬಾರದು. ಪರಂಪರೆ ಯಿಂದ ಬಂದಿರುವ ಜ್ಞಾನವೂ ಕೂಡ ಸಂದರ್ಭಕ್ಕೆ ತಕ್ಕಂತೆ, ಉಪಯುಕ್ತವಾಗುವ ರೀತಿಯಲ್ಲಿ ತಿಳಿಸಲ್ಪಡಬೇಕು. ಜೀವನದಲ್ಲಿ ಶಾಂತಿ, ನೆಮ್ಮದಿ ಹಾಗೂ ಪ್ರೀತಿಯನ್ನು ತರುವ ಮೌಲ್ಯ ಗಳನ್ನೇ ಹೆಚ್ಚಾಗಿ ತಿಳಿಸುವುದು ಉತ್ತಮ. ಮೌಲ್ಯಗಳಿಂದ ಮಕ್ಕಳು ಸುಸಂಸ್ಕೃತ ರಾಗುತ್ತಾರೆ. ಅದರೊಂದಿಗೆ ಭಾಷೆಗಳನ್ನು ಕಲಿಸುವುದು ಹಾಗೂ ವಿಚಾರಗಳನ್ನು ಸ್ಪಷ್ಟವಾಗಿ ಆಲೋಚಿಸಿ ಮಾತನಾಡು ವುದನ್ನು ಹೇಳಿಕೊಡುವುದು ಬಹಳ ಮುಖ್ಯ.

ಸಣ್ಣ ಪ್ರಾಯದಲ್ಲಿ ಬಹಳಷ್ಟು ವಿಚಾರಗಳನ್ನು ಗ್ರಹಿಸುವ, ಕಲಿಯುವ ಸಾಮರ್ಥ್ಯ ಮಕ್ಕಳಿಗಿರುತ್ತದೆ. ಮೂರು ಅಥವಾ ನಾಲ್ಕು ಭಾಷೆಗಳನ್ನು ಕಲಿಯುವ ಮಕ್ಕಳು, ಯುವಕರಾದಂತೆ ಆ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ ಎಂದು ಭಾಷಾ ಶಾಸ್ತ್ರಜ್ಞರು ಹಾಗೂ ಮಕ್ಕಳ ತಜ್ಞರು ಹೇಳುತ್ತಾರೆ. ಆದ್ದರಿಂದಲೇ ಶಾಲೆಗಳಲ್ಲಿ ಮೂರು ಭಾಷೆಗಳನ್ನು ಹೇಳಿಕೊಡುವ ಪಠ್ಯಕ್ರಮ ಜಾರಿಗೆ ಬಂದದ್ದು. ಈ ಭಾಷೆ ಕಲಿಯಬಾರದು, ಅದು ನಮ್ಮದಲ್ಲ ಎನ್ನುವ ಸಂಕುಚಿತ ಭಾವನೆಗಳಿಂದ ಅವರ ಕಲಿಕೆಗೆ ತೊಂದರೆಯಾಗುವುದಲ್ಲದೆ ಭೇದದೃಷ್ಟಿಗೆ ಆಸ್ಪದವಾಗುತ್ತದೆ. ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿಯುವುದರ ಮೂಲಕ ಮಕ್ಕಳು ಭಾವನಾತ್ಮಕವಾಗಿ ಹೆಚ್ಚು ಜನರೊಂದಿಗೆ ಸ್ಪಂದಿಸಬಹುದು ಮತ್ತು ಆಯಾ ಸಂಸ್ಕೃತಿಗಳ ಪರಿಚಯದಿಂದ ಜ್ಞಾನಭಂಡಾರ ವನ್ನು ವಿಸ್ತಾರಗೊಳಿಸಬಹುದು.

ಕೆಲವೊಮ್ಮೆ ಮಕ್ಕಳು ಗಹನವಾದ ಪ್ರಶ್ನೆಗಳನ್ನು ಕೇಳುತ್ತಾರೆ. "ದೇವರು ಎಲ್ಲಿದ್ದಾನೆ?" ಎಂಬುದು ಸಾಮಾನ್ಯವಾಗಿ ಮಕ್ಕಳು ಕೇಳುವ ಪ್ರಶ್ನೆ. ಅವನು ಆಕಾಶದಲ್ಲಿದ್ದಾನೆ, ಸ್ವರ್ಗದಲ್ಲಿದ್ದಾನೆ ಎಂದು ಹಾರಿಕೆಯ ಉತ್ತರವನ್ನು ಕೊಡುವುದಕ್ಕಿಂತ ಎಲ್ಲೆಡೆ ವ್ಯಾಪಿಸಿದ್ದಾನೆ, ಎಲ್ಲರಲ್ಲೂ ಇದ್ದಾನೆ ಎನ್ನುವ ಭಾವನೆಯನ್ನು ಹೇಳಿದರೆ ಮಕ್ಕಳು ಎಲ್ಲವನ್ನೂ ಪೂಜ್ಯ ದೃಷ್ಟಿಯಿಂದ ನೋಡಲು ಪ್ರಾರಂಭಿಸುತ್ತಾರೆ. ದೇವರು ಎಲ್ಲರಲ್ಲೂ ಏಕ ಪ್ರಕಾರವಾಗಿ ಇರುವುದರಿಂದ ತಾರತಮ್ಯ ಮಾಡದೆ ಎಲ್ಲ ರನ್ನೂ ಪ್ರೀತಿಸಬೇಕು. ಜೀವನಕ್ಕೆ ಒಂದು ಉದ್ದೇಶವಿದೆ. ನಾವು ದೇವರಲ್ಲೇ ಜೀವಿಸಿದ್ದೇವೆ. ಆದ್ದರಿಂದ ಮೌಲ್ಯಗಳು, ನೈತಿಕತೆ ನಮ್ಮ ಸ್ವಭಾವದಲ್ಲಿಯೇ ಇವೆ. ಅವು ನಮ್ಮ ಸಹಜ ಗುಣ. ಇದಕ್ಕೆ ತಡೆ ಮಾಡುವ ದ್ವೇಷ, ಅಸೂಯೆ, ಬಯಕೆಗಳನ್ನು ನಿಗ್ರಹಿಸುವುದೇ ಶಿಕ್ಷಣ ಎಂದು ತಿಳಿಸಿದಾಗ ಮಕ್ಕಳಿಗೆ ತಮಗೂ ಇತರರಿಗೂ ಇರುವ ಬಾಂಧವ್ಯದ ಪರಿಚಯವಾಗು ತ್ತದೆ, ಸಣ್ಣತನ ಮಾಯವಾಗುತ್ತದೆ. ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಶಿವಾಜಿ ಇವರೆಲ್ಲ ಬಾಲ್ಯದಲ್ಲಿ ತಮ್ಮ ತಾಯಂದಿರಿಂದ ಪಡೆದ ಇಂತಹ ಧಾರ್ಮಿಕ ಸೂಕ್ಷ್ಮತೆಗಳನ್ನು ಪ್ರಸಿದ್ಧ ವ್ಯಕ್ತಿಗಳಾದ ನಂತರವೂ ಸ್ಮರಿಸುತ್ತಿದ್ದರು.

> ಮಕ್ಕಳು ಆರಂಭದಲ್ಲಿ ತಾಯಿತಂದೆಗಳನ್ನು ಪ್ರೀತಿಸುತ್ತಾರೆ. ಬೆಳೆದಂತೆಲ್ಲ ತೂಗಿ ನೋಡುತ್ತಾರೆ, ಕೆಲವು ವೇಳೆ ಕ್ಷಮಿಸುತ್ತಾರೆ.
>
> —ಆಸ್ಕರ್ ವೈಲ್ಡ್

ಮಕ್ಕಳ ಎಲ್ಲ ಪ್ರಶ್ನೆಗಳಿಗೂ ಉತ್ತರ ಗೊತ್ತಿಲ್ಲದಿದ್ದರೆ ಪೋಷಕರು ಸತ್ಯವನ್ನು ಒಪ್ಪಿಕೊಳ್ಳುವುದು ಬಹಳ ಮುಖ್ಯ. ಅಸಡ್ಡೆಯಿಂದ ನೀಡಿದ ಉತ್ತರಕ್ಕಿಂತ 'ನನಗೆ ಗೊತ್ತಿಲ್ಲ' ಎಂಬ ಪ್ರಾಮಾಣಿಕತೆ ಮಕ್ಕಳಿಗೆ ಮೆಚ್ಚುಗೆಯಾಗುತ್ತದೆ. ಸಾಮಾನ್ಯವಾಗಿ ಮಕ್ಕಳು ತಂದೆಯನ್ನು ಸರ್ವಜ್ಞನೆಂದೇ ಭಾವಿಸುತ್ತಾರೆ ಎಂದು ಮನೋವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಎಲ್ಲ ಸಂಶಯಗಳಿಗೂ ತಂದೆಯೇ ಬೌದ್ಧಿಕ ಪರಿಹಾರ ಒದಗಿಸಬೇಕು ಎಂದು ಮಕ್ಕಳು ಬಯಸುತ್ತಾರೆ. ಭಾವನಾತ್ಮಕವಾಗಿ ತಾಯಿಯೊಂದಿಗೆ ಹೆಚ್ಚು ಸ್ಪಂದಿಸುತ್ತಾರೆ. ನೋವು, ದುಃಖಗಳಲ್ಲಿ ಮೊದಲು ಓಡುವುದು ತಾಯಿಯ ಬಳಿಗೇ. ತಂದೆ ತನಗೆ ಗೊತ್ತಿಲ್ಲದ ವಿಚಾರಗಳು ಅನೇಕ ಇವೆ ಎಂದು ಒಪ್ಪಿಕೊಂಡಾಗ ಮಕ್ಕಳಿಗೆ ಅವನಲ್ಲಿ ವಿಶ್ವಾಸ ಕ್ಷೀಣಿಸುವುದಿಲ್ಲ. ತಿಳಿಯುವುದು ಬಹಳಷ್ಟಿದೆ, ತನ್ನ ತಂದೆಯೂ ಕೂಡ ಹೊಸದಾಗಿ ಆಲೋಚಿಸಲು ಸಿದ್ಧರಿದ್ದಾರೆ ಎಂದು ಮನವರಿಕೆಯಾದಾಗ ಜಿಜ್ಞಾಸೆ ಅಥವಾ ತಿಳಿಯುವ ಹಂಬಲ ಅವರಲ್ಲಿ ಹೆಚ್ಚುತ್ತದೆ ಮತ್ತು ತಂದೆಯ ಬಗ್ಗೆ ಗೌರವವೂ ಮೂಡುತ್ತದೆ.

ನರೇಂದ್ರನಾಥ (ಸ್ವಾಮಿ ವಿವೇಕಾನಂದರು) ತನ್ನ ತಂದೆಯನ್ನು ಬಹಳ ಗೌರವಿಸುತ್ತಿದ್ದ. ತನ್ನ ತಂದೆ ಮನೆಗೆ ಬಂದವರಿಗೆಲ್ಲ ದಾನ ನೀಡುವುದು ಹಾಗೂ ಅಲೆಮಾರಿ ಭಿಕ್ಷುಕರಿಗೆ, ಸೋಮಾರಿ ಬಂಧುಬಳಗದವರಿಗೆ ಆಶ್ರಯ ನೀಡುವುದನ್ನು ಕಂಡು ನರೇಂದ್ರ ತಂದೆಯನ್ನು ಒಮ್ಮೆ ಕೇಳಿದ, "ನೀವೇಕೆ ಇವರಿಗೆ ಪ್ರೋತ್ಸಾಹ ನೀಡುತ್ತೀರಿ? ಕಷ್ಟಪಟ್ಟು ದುಡಿಯಲು ಹೇಳಿ. ಅವರ ಚಟಗಳಿಗೆ ಹಣ ನೀಡುವುದು ಸರಿಯೆ?" ತಂದೆ ಬೇಸರಮಾಡಿಕೊಳ್ಳದೆ ಹೇಳಿದ ಮಾತುಗಳು ನರೇಂದ್ರನಿಗೆ ಜಗತ್ತಿನ ವಾಸ್ತವವನ್ನು ಪರಿಚಯಿಸಿತು: "ಇವರೆಲ್ಲ ಜೀವನದಲ್ಲಿ ಎಷ್ಟೊಂದು ನೊಂದಿದ್ದಾರೆ! ಸ್ವಲ್ಪ ತಂಬಾಕು ಸೇದುವುದರಿಂದಲೋ, ಮದ್ಯ ಸೇವಿಸುವುದರಿಂದಲೋ ಅವರಿಗೆ ತಾತ್ಕಾಲಿಕವಾಗಿಯಾದರೂ ದುಃಖ ಮರೆಯಲು ಸಾಧ್ಯವಾಗುವುದಾದರೆ ಅದರಲ್ಲಿ ತಪ್ಪೇನಿದೆ? ನಿನಗೆ ಜಗತ್ತು ಎಷ್ಟು ನಿಷ್ಠುರವೆಂಬ ಅರಿವಾದಾಗ ಇತರರ ದುಃಖವನ್ನು ತಿಳಿಯುವ ಹೃದಯ ಬಂದೀತು." ಮುಂದೆ ಸ್ವಾಮಿ ವಿವೇಕಾನಂದರಲ್ಲಿ ವ್ಯಕ್ತವಾದ ಮಾನವಾನುಕಂಪೆಯ ಬೇರುಗಳು ಇಲ್ಲಿ ನೆಲೆಗೊಂಡಿದ್ದವು.

ಮಕ್ಕಳನ್ನು ಸ್ವಾವಲಂಬಿಗಳಾಗಿಸುವುದೂ ಪೋಷಕರ ಮುಖ್ಯ ಕರ್ತವ್ಯ. ದುರ್ಬಲತೆಯನ್ನು ಒಳ್ಳೆಯತನ, ವಿಧೇಯತೆ ಎಂದು ಪೋಷಿಸದೆ ಮಕ್ಕಳಿಗೆ ಸ್ವಾಭಿಮಾನದ ರುಚಿಯನ್ನು ನೀಡಬೇಕು. ಪರಾವಲಂಬಿಗಳಾಗಿ ಬದುಕುವುದು, ಇತರರ ಸಹಾಯ, ಸಹಾನುಭೂತಿಗಳನ್ನು ಆಶ್ರಯಿಸುವುದು ಹೇಡಿಯ ಲಕ್ಷಣವೆಂಬುದನ್ನು ಅವರಿಗೆ ತಿಳಿಸಬೇಕು. ಒಮ್ಮೆ ತನ್ನ ತಂದೆಯು ಮನೆಯಲ್ಲಿದ್ದ ಅನೇಕ ವಸ್ತುಗಳನ್ನು ಬಡವರಿಗೆ ನೀಡುತ್ತಿದ್ದುದನ್ನು ಕಂಡು ನರೇಂದ್ರ ಅವರನ್ನು ಕೇಳಿದ, "ನನಗಾಗಿ ಏನನ್ನು ಉಳಿಸಿರುವೆ?" ತಂದೆ ಕೋಪವನ್ನು ವ್ಯಕ್ತಪಡಿಸದೆ ಮಗನನ್ನು ನಿಲುವುಗನ್ನಡಿಯ ಎದುರು ನಿಲ್ಲಿಸಿದರು. "ನಿನ್ನಲ್ಲಿರುವ ಶಾರೀರಿಕ, ಮಾನಸಿಕ ಸಾಮರ್ಥ್ಯಗಳು ನನ್ನ ಬಳುವಳಿ. ಅವುಗಳನ್ನು ಬಳಸಿಕೊಂಡು ನಿನ್ನ ಭವಿಷ್ಯವನ್ನು ರೂಪಿಸಿಕೋ" ಎಂದರು. ಇಂತಹ ಸಣ್ಣ ಘಟನೆಗಳೂ ಕೂಡ ಮಕ್ಕಳ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ.

ಕೆಲವೊಮ್ಮೆ ಪೋಷಕರು ಮಕ್ಕಳಲ್ಲಿ ದೊಡ್ಡವರ ನಡವಳಿಕೆಯನ್ನು ಬಯಸಿ ವೃಥಾ ಒತ್ತಡ ಹೇರುತ್ತಾರೆ. ದೊಡ್ಡವರ ಆಸಕ್ತಿಗಳೇ ಬೇರೆ, ಮಕ್ಕಳ ಪ್ರಪಂಚವೇ ಬೇರೆ ಎಂಬುದು ಇವರಿಗೆ ತಿಳಿದಿರುವುದಿಲ್ಲ. ಐದು ವರ್ಷ ವಯಸ್ಸಿನಲ್ಲೇ ಜವಾಬ್ದಾರಿಯನ್ನು ಕಾಣಬಯಸುವ ಪೋಷಕರು ಮಕ್ಕಳಲ್ಲಿ ವಿದ್ಯೆ, ಬುದ್ಧಿವಂತಿಕೆಗಳನ್ನು ಅರಸಿ ಅವರಲ್ಲಿ ಬಾಲ್ಯದ ಸೊಬಗನ್ನು ಮರೆಯಿಸುತ್ತಾರೆ. ಮಧ್ಯಮವರ್ಗದ ಕುಟುಂಬಗಳಲ್ಲಿ ಆರ್ಥಿಕ ಒತ್ತಡಗಳನ್ನೂ ಹೇರುತ್ತಾರೆ. ತಮ್ಮೆಲ್ಲ ಆಸೆಗಳನ್ನು ಮಕ್ಕಳ ಮೂಲಕ ಪೂರೈಸುವುದೇ ಅವರ ಉದ್ದೇಶವಾಗಿಬಿಡುತ್ತದೆ. ಇಂತಹ ಒತ್ತಡಕ್ಕೊಳಗಾದ ಮಕ್ಕಳು ಬೆಳೆದಂತೆ ಅವರಿಗೆ ತಂದೆತಾಯಿಗಳ ಬಗ್ಗೆ ಪ್ರತಿಭಟಿಸುವಷ್ಟು ದ್ವೇಷ ಬೆಳೆಯುತ್ತದೆ.

ಒಂದು ಗಿಡವನ್ನು ಬೆಳೆಸುವಾಗ ಅದಕ್ಕೆ ಅತಿಯಾಗಿ ರಕ್ಷಣೆ ನೀಡಲು ಗೋಡೆಯನ್ನೇ ಕಟ್ಟಿಬಿಟ್ಟರೆ, ಅತ್ತಿತ್ತ ಬಾಗದಿರಲಿ ಎಂದು ಗಟ್ಟಿಯಾಗಿ ತಂತಿಗಳಿಂದ ಕಟ್ಟಿಬಿಟ್ಟರೆ, ಆ ಗಿಡ ಹೇಗೆ ತಾನೇ ಬೆಳೆದೀತು? ಸ್ವಾಭಾವಿಕವಾಗಿ ವ್ಯಕ್ತಿತ್ವವು ರೂಪುಗೊಳ್ಳುವಂತೆ ಅನುವು ಮಾಡಿಕೊಡುತ್ತ ಆದರ್ಶ ವ್ಯಕ್ತಿಗಳ ಜೀವನದೃಷ್ಟಾಂತಗಳಿಂದ ಹಾಗೂ ತಮ್ಮದೇ ಆಚರಣೆಗಳ ಉದಾಹರಣೆಯಿಂದ ಮಕ್ಕಳ ಜೀವನಕ್ಕೆ ಬೇಕಾಗುವ ಆದರ್ಶಗಳನ್ನು ಪೂರೈಸುವ ಪೋಷಕರೇ ನಿಜವಾಗಿಯೂ ಉತ್ತಮ ತಂದೆತಾಯಿಗಳು.

✪